ದಿನಾಂಕಃ 20.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

ದಿ.18.02.2025 ರಂದು ನನ್ನ ಮತ್ತು ಆರೋಪಿಯ ಮಧ್ಯೆ ಆದ ರಾಜಿ ಸಂದಾನ ಮತ್ತು ಅದರ ಬಾಬ್ತು ಸಲ್ಲಿಸಿರುವ ಅರ್ಜಿಗೆ ನಾನು ಪ್ರಸ್ತುತವಾಗಿ ಒಪ್ಪುವುದಿಲ್ಲ ಎಂದರೆ ಸರಿ. ಸದರಿ ರಾಜಿಯಾದನಂತರ ಆರೋಪಿಯು ಅದರ ಬಾಬ್ತು ರೂ.10,000/- ಗಳನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ರೂ.10,000/- ಗಳನ್ನು ನಾನು ಆರೋಪಿಗೆ ಹಿಂತಿರುಗಿಸಲು ತಯಾರಿರುವುದಿಲ್ಲ. 2022 ನೇ ಸಾಲಿನ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಆರೋಪಿಗೆ ನಾನು ಹಣವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಎರಡು ಕಂತಿನಲ್ಲಿ ಹಣವನ್ನು ನೀಡಿರುತ್ತೇನೆ. ಮೊದಲನೇ ಕಂತನ್ನು ನವಂಬರ್ ನಲ್ಲಿ ನೀಡಿರುತ್ತೇನೆ. ಎರಡನೇ ಕಂತನ್ನು ಯಾವ ದಿನ ನೀಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಮೊದಲನೇ ಕಂತಿನಲ್ಲಿ ರೂ.1,30,000/- ನ್ನು ನೀಡಿರಬಹುದು. ಎರಡನೇ ಕಂತಿನಲ್ಲಿ ರೂ.1,07,000/- ರೂಗಳನ್ನು ನೀಡಿರಬಹುದು. ಆರೋಪಿಯು ಹಣವನ್ನು ನೀಡಿದ ನಂತರದಲ್ಲಿ ಚೆಕ್ ನ್ನು ನೀಡಿರುತ್ತಾರೆ. ಆರೋಪಿಯು ಯಾವ ದಿನಾಂಕವನ್ನು ನಮೂದಿಸಿ ಚೆಕ್ ನ್ನು ನೀಡಿರುತ್ತಾರೆ ಎಂದು ನೆನಪಾಗುತ್ತಿಲ್ಲ. 2022 ನೇ ನವಂಬರ್ ಹಿಂದಿನ ದಿನಗಳಲ್ಲಿ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿ.

ನನ್ನ ಮತ್ತು ಆರೋಪಿಯ ನಡುವೆ ಎರಡು ವರ್ಷಗಳಿಂದ ವ್ಯವಹಾರವಿತ್ತು ಸದರಿ ವ್ಯವಹಾರದ ಮಧ್ಯದಲ್ಲಿ ಆರೋಪಿಯು ಚೆಕ್ ನ್ನು ನೀಡಿ ಹಣವನ್ನು ಪಡೆದ ನಂತರ ಈ ಪ್ರಕರಣವು ಸಂಭವಿಸಿರುತ್ತದೆ. ಈ ಪ್ರಕರಣದ ಬಾಬ್ತು 2022 ನೇ ಸಾಲಿನ ನವೆಂಬರ್ ನ ಹಿಂದಿನ ದಿನಗಳಲ್ಲಿ ನನ್ನ ಮತ್ತು ಆರೋಪಿಯ ನಡುವೆ ಯಾವುದಾದರೂ ವ್ಯವಹಾರ ಆಗಿತ್ತ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ ನ್ನು ಜನವರಿ 2023 ನೇ ಸಾಲಿನಲ್ಲಿ ನೀಡಿರುವ ಚೆಕ್ ನ್ನು ಹಾಜರುಪಡಿಸಿರುತ್ತೇನೆ. ನಿಪಿ-1 ರ ಮೇಲಿರುವ ಬರವಣಿಗೆ ಮತ್ತು ಸಹಿಯನ್ನು ಆರೋಪಿಯೇ ಮಾಡಿರುತ್ತಾರೆ. ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ ನ್ನು ಎರಡನೇ ಕಂತನ್ನು ಪಾವತಿ ಮಾಡುವ ಸಮಯದಲ್ಲಿ ನೀಡಿರುತ್ತಾರೆ. ಪಿರ್ಯಾದಿನಲ್ಲಿ ಆರೋಪಿಯು ಯಾವ ದಿನ ಚೆಕ್ ನ್ನು ನೀಡಿರುವುದಾಗಿ ನಮೂದಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಜನವರಿ ತಿಂಗಳಿನಲ್ಲಿ ನೀಡಿರುವ ಚೆಕ್ ನ್ನು ಹಾಜರುಪಡಿಸಿರುತ್ತೀರ ಎಂದರೆ ಸಾಕ್ಷಿಯು ಆರೋಪಿಯು ನನಗೆ ಕೇವಲ ಒಂದೇ ಚೆಕ್ ನ್ನು ನೀಡಿರುವುದು, ಅದರ ಸಂಖ್ಯೆ ನೆನಪಿರುವುದಿಲ್ಲ. ನಾನು ಆರೋಪಿಗೆ ಡಿಸೆಂಬರ್ ತಿಂಗಳಿನಲ್ಲಿ ಹಣವನ್ನು ನೀಡಿರುವ ದಿನಾಂಕ ನೆನಪಿರುವುದಿಲ್ಲ. ಆರೋಪಿಯು ಡಿಸೆಂಬರ್ ನೀಡಿರುವಂತಹ ಚೆಕ್ ನ್ನು ಯಾವ ದಿನ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ.

ನಾನು ನನ್ನ ಅಂಗಡಿಯ ವ್ಯವಹಾರದಿಂದ ಬಂದ ಹಣವನ್ನು ಆರೋಪಿಗೆ ನೀಡಿರುತ್ತೇನೆ.

ಆರೋಪಿಯು ಈ ಹಿಂದೆ ವರ್ತಕರ ಸಂಘದಲ್ಲಿ ಕೆಲಸ ಮಾಡುತ್ತಿದ್ದರು, ಪ್ರಸ್ತುತವಾಗಿ ಅಲ್ಲಿ ಕೆಲಸ ಮಾಡುತ್ತಿಲ್ಲ. ಆ ಸಮಯದಲ್ಲಿ ನಾನು ವರ್ತಕರ ಸಂಘದಲ್ಲಿ ಸದಸ್ಯನಾಗಿರುತ್ತೇನೆ. ಸದರಿ ಸಮಯದಲ್ಲಿ ಸಂಘದ ಅಧ್ಯಕ್ಷರು ಯಾರು ಎಂದು ಸರಿಯಾಗಿ ನೆನಪಾಗುತ್ತಿಲ್ಲ. ಪ್ರಸ್ತುತವಾಗಿ ತಿಮ್ಮಶೆಟ್ಟರು ಎಂಬುವವರು ಅಧ್ಯಕ್ಷರಾಗಿರುತ್ತಾರೆ. ಮಂಜುನಾಥ್ ಎಂಬುವವರ ಸದರಿ ಸಂಘದಲ್ಲಿ ಕಾರ್ಯದರ್ಶಿಯಾಗಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.